## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ದಾಪುರ

**ಸಿ.ಸಿ. 305/2025**

**ಫಿರ್ಯಾದಿಃ** **ಶರತ್ ಎಂ. ಆರ್. ತಂದೆ ರಾಮಚಂದ್ರ,**
**ಪ್ರಾಯಸ್ಥ, ಸಾಃ ಮುಗದೂರ, ಸಿದ್ದಾಪುರ ತಾಲ್ಲೂಕು,**
**ಉತ್ತರ ಕನ್ನಡ**

**-ವಿರುದ್ಧ-**

**ಆರೋಪಿಃ** **ಶಬ್ಬರ ಇಬ್ರಾಹಿಂ ಶೇಖ್**
**28 ವರ್ಷ, ವಾಸಃ ಹಾಳದಕಟ್ಟಾ,ಕೊಂಡ್ಲಿ ಪೋಸ್ಟ,**
**ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ.**

ನಾನು **ಶ್ರೀ. ಹರೀಶಕುಮಾರ್.ಎಮ್. ಬಿ.ಕಾಂ., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ಧಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

**ಆಪಾದನೆ**

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರಿಗೆ ಆರೋಪಿತನಾದ ನೀನು ಪರಿಚಯದವರಾಗಿದ್ದು, ಪಿರ್ಯಾದುದಾರರು ಮಾರುತಿ ಸುಜಕಿ ಸ್ವಿಫ್ಟ ಡಿಝೈರ್ ಕಾರ ಟೂರಿಸ್ಟ ಟ್ಯಾಕ್ಸಿ 2017 ನೇ ಮಾಡೆಲ್ ನಂ KA-04 AB-2666 ನೇ ಮೋಟಾರು ವಾಹನದ ಮಾಲಿಕರಾಗಿದ್ದು, ಸದ್ರಿ ವಾಹನವನ್ನು ದಿನಾಂಕ 11-12-2024 ರಂದು ಅದ ಕ್ರಯದ ವ್ಯವಾಹಾರದಂತೆ ಆರೋಪಿತನಾದ ನೀನು ರೂ.3,75,000/- ಗಳಿಗೇ ಖರೀದಿ ಮಾಡಲು ಒಪ್ಪಿ ಕ್ರಯದ ವ್ಯವಹಾರದಂತೆ ರೂ. 3,75,000/- ಗಳ ಪೈಕಿ ರೂ 70,000/- ನಗದು ಮೂಲಕ ಹಾಗೂ ರೂ 69,000/- ಗಳನ್ನು ಫೊನ್ ಪೇ ಮೂಲಕ ಜಮಾ ಮಾಡಿದ್ದು ಆದರೆ ಉಳಿದ ರೂ.2,36,000/-ರೂಗಳ ಬಾಬ್ತಿಗಾಗಿ ದಿನಾಂಕ 10.06.2025 ರ IDFC First Bank, ಸಾಗರ ಶಾಖೆಯ ಚೆಕ್ಕಿನ ಸಂಖ್ಯೆ 000008 ನ ರೂ.2,36,000/- ನ ಚೆಕನ್ನು ನೀಡಿದ್ದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು ಬ್ಯಾಂಕ್ ಆಫ್ ಬರೋಡಾ., ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 11.06.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 20.06.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸನ್ನು ದಿನಾಂಕ: 27.06.2025 ರಂದು ನೀನು ಸದರಿ ನೋಟಿಸ್ಸನ್ನು ನಿರಾಕರಿಸಿದ್ದು unclaimed ಎಂಬ ಹಿಂಬರದೊಂದಿಗೆ ಹಿಂದಿರುಗಿದ್ದು, ಸದರಿ

ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಪರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

**ಪ್ರಶ್ನೆಃ 3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000008 ನಿಮ್ಮ IDFC First Bank ಖಾತಾ ನಂ. 10066794887 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000008 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 000008 ನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 6** ಪಿರ್ಯಾದುದಾರರಿಂದ ದಿನಾಂಕ 11.12.2024 ರಂದು ರೂ.3,75,000/- ಬೆಲೆ ಬಾಳವ ಮಾರುತಿ ಸುಜಕಿ ಸ್ವಿಫ್ಟ ಡಿರೈಜ್ಗರ್ ಕಾರನ್ನು ಕೊಂಡಿರುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000008 ದಿನಾಂಕ 10.06.2025 ರಲ್ಲಿ ನಮೂದಿಸಿದ ರೂ.2,36,000/- ನ್ನು (ಎರಡು ಲಕ್ಷದ ಮೂವತ್ತಾರು ಸಾವಿರ ರೂಪಾಯಿಗಳು ಮಾತ್ರ) ಪಿರ್ಯಾದುದಾರರಿಗೆ ಪಾವತಿ ಮಾಡುವ ಭಾದ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **02-07-2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**